ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	764
ಮಾನ್ಯ ಸದಸ್ಯರ ಹೆಸರು	ಶ್ರೀ ಹೆಚ್.ಎಂ.ರೇವಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	17.12.2018
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಎಷ್ಟು ಹಿಂದುಳಿದ ವರ್ಗಗಳ ನವೋದಯ ಮಾದರಿ ವಸತಿ ಶಾಲೆ/ ಮೊರಾರ್ಜಿ ವಸತಿ ಶಾಲೆಗಳು ಕೆ.ಆರ್.ಐ.ಎಸ್. ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿವೆ;	ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ 166 ಹಿಂದುಳಿದ ವರ್ಗಗಳ ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ.
ಆ)	ಸದರಿ ಶಾಲೆಗಳಿಗೆ ಸಕಾಲದಲ್ಲಿ ಸಮವಸ್ತ್ರ, ಪಠ್ಯ ಪುಸ್ತಕ ಸ್ಟೇಷನರಿ ಐಟಂ, ಹಾಸಿಗೆ ಹೊದಿಕೆ, ಇತ್ಯಾದಿ ಅಗತ್ಯ ವಸ್ತುಗಳನ್ನು 2018-19ನೇ ಸಾಲಿನಲ್ಲಿ ಜುಲೈ 2018ರೊಳಗೆ ಪೂರೈಸಲಾಗಿದೆಯೇ;	ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ 166 ವಸತಿ ಶಾಲಾ/ಕಾಲೇಜುಗಳಿಗೆ 2018-19ನೇ ಸಾಲಿನ ಶೈಕ್ಷಣಿಕ ವರ್ಷದ ಪ್ರಾರಂಭವಾದ ಮಾಹೆಯಲ್ಲೇ ಪಠ್ಯ ಪುಸ್ತಕಗಳನ್ನು ಪೂರೈಸಲಾಗಿದೆ. ಸಮವಸ್ತ್ರ, ಸ್ಟೇಷನರಿ ಸಾಮಾಗ್ರಿಗಳು, ಹಾಸಿಗೆ ಹೊದಿಕೆಗಳನ್ನು ಸಾರ್ವತ್ರಿಕ ಚುನಾವಣೆ ವರ್ಷವಾಗಿರುವುದರಿಂದ, ಸಚಿವ ಸಂಪುಟದ ಅನುಮೋದನೆ ಪಡೆದು ಸೆಪ್ಟಂಬರ್-2018ರ ಮಾಹೆಯಲ್ಲಿ ಕ್ರಮವಹಿಸಿದ್ದು, ಪೂರೈಕೆಯಾಗುತ್ತಿದೆ.
ಇ)	ಇಲ್ಲದಿದ್ದಲ್ಲಿ, ಕಾರಣಗಳನ್ನು ತಿಳಿಸುವುದು.	<u>ಸಮವಸ್ತ್ರ:</u> ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲಾ/ಕಾಲೇಜುಗಳ ವಿದ್ಯಾರ್ಥಿಗಳಿಗೆ ಸಮವಸ್ತ್ರಗಳ ಪೂರೈಕೆಗೆ ಸಚಿವ ಸಂಪುಟದ ಅನುಮೋದನೆ ಪಡೆದು ಸಿದ್ದಪಡಿಸಿದ ಸಮವಸ್ತ್ರಗಳನ್ನು ಮೇ॥ ಕೆ.ಹೆಚ್.ಡಿ.ಸಿ ಸಂಸ್ಥೆಯಿಂದ ಖರೀದಿಸಿ ಸರಬರಾಜು ಮಾಡಲಾಗಿದೆ.ಸದರಿ ಸಂಸ್ಥೆಗೆ ದಿನಾಂಕ: 25.09.2018ರಂದು ಸರಬರಾಜು ಆದೇಶ ನೀಡಲಾಗಿದ್ದು, ಪ್ರಸ್ತುತ 19 ಜಿಲ್ಲೆಗಳ ವಸತಿ ಶಾಲಾ/ ಕಾಲೇಜುಗಳಿಗೆ ಸಮವಸ್ತ್ರ ಸರಬರಾಜು ಪೂರ್ಣ ಗೊಂಡಿದೆ. ಬಾಕಿ ಉಳಿದ 11 ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ, ಮಂಡ್ಯ, ದಾವಣಗೆರೆ, ಯಾದಗಿರಿ, ಧಾರವಾಡ, ಗದಗ, ಚಿಕ್ಕಮಗಳೂರು, ವಿಜಯಪುರ, ಉಡುಪಿ, ಹಾಸನ ಜಿಲ್ಲೆಗಳ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಸಮವಸ್ತ್ರ ಸರಬರಾಜು ಪೂರೈಕೆ ಪ್ರಗತಿಯಲ್ಲಿದ್ದು, ತ್ವರಿತವಾಗಿ ಪೂರ್ಣ ಗೊಳಿಸಲಾಗುವುದು.

...2

		<u>ನೋಟ್ ಪುಸ್ತಕ ಮತ್ತು ಲೇಖನ ಸಾಮಾಗ್ರಿಗಳು</u> ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲಾ/ಕಾಲೇಜುಗಳ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ ಮತ್ತು ಲೇಖನ ಸಾಮಗ್ರಿಗಳನ್ನು ಪೂರೈಕೆ ಮಾಡಲು ಸಚಿವ ಸಂಪುಟದ ಅನುಮೋದನೆ ಪಡೆದು ಮೆ॥ ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿ., ಬೆಂಗಳೂರು, (ಎಂ.ಎಸ್.ಐ.ಎಲ್) ರವರಿಂದ ಖರೀದಿಸಿ ಸರಬರಾಜು ಮಾಡಲು ಆದೇಶ ಹೊರಡಿಸಲಾಗಿದೆ. ಸದರಿ ಸಂಸ್ಥೆಗೆ ದಿನಾಂಕ: 17.09.2018 ರಂದು ಸರಬರಾಜು ಆದೇಶ ನೀಡಲಾಗಿದೆ. ಪ್ರಸ್ತುತ 05 ಜಿಲ್ಲೆಗಳ ವಸತಿ ಶಾಲಾ/ಕಾಲೇಜುಗಳಿಗೆ (ಚಿತ್ರದುರ್ಗ, ಬಳ್ಳಾರಿ, ದಾವಣಗೆರೆ, ಮಂಡ್ಯ,ರಾಮನಗರ) ಸರಬರಾಜು ಪ್ರಕ್ರಿಯೆ ಪೂರ್ಣ ಗೊಂಡಿದ್ದು, ಬಾಕಿ ಉಳಿದ 25 ಜಿಲ್ಲೆಗಳಿಗೆ ಸರಬರಾಜು ಪ್ರಕ್ರಿಯೆ ಪ್ರಗತಿಯಲ್ಲಿದ್ದು, ತ್ವರಿತ ವಾಗಿ ಪೂರ್ಣ ಗೊಳಿಸಲಾಗುವುದು. **<u>ಹಾಸಿಗೆ ಹೊದಿಕೆ:</u>** ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೇಡಿಕೆ ಇರುವ 93 ಹಿಂದುಳಿದ ವರ್ಗಗಳ ವಸತಿ ಶಾಲಾ/ಕಾಲೇಜುಗಳ ವಿದ್ಯಾರ್ಥಿಗಳಿಗೆ 16872 ಹಾಸಿಗೆ ಮತ್ತು 16872 ದಿಂಬುಗಳನ್ನು 2018ರ ಅಕ್ಟೋಬರ್ ಮಾಹೆಯ ಅಂತ್ಯದಲ್ಲಿ ಸರಬರಾಜು ಮಾಡಲಾಗಿದೆ.

ಸಂ: ಹಿಂವಕ 1265 ಬಿಎಂಎಸ್ 2018

(ಸಿ. ಪುಟ್ಟರಂಗಶೆಟ್ಟಿ)
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.